ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ಡಿ.ಟಿ.ಇ/ಎನ್‌ಎಸ್‌ಎಸ್/ಸಿ.ಎ(1)/2013-14

ಆಯುಕ್ತರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 22.12.2023

## ಸುತ್ತೋಲೆ

ವಿಷಯ: ರಾಷ್ಟ್ರೀಯ ಸೇವಾ ಯೋಜನೆಯ ಅನುದಾನಿತ ಹಾಗೂ ಸ್ವ-ಆರ್ಥಿಕ ಘಟಕಗಳಲ್ಲಿನ ಉಳಿಕೆ ಮೊತ್ತವನ್ನು ಬಳಸುವ ಬಗ್ಗೆ

ಉಲ್ಲೇಖ:
1. ಇಲಾಖಾ ಸುತ್ತೋಲೆ ಸಂಖ್ಯೆ: ಡಿ.ಟಿ.ಇ/ಎನ್.ಎಸ್.ಎಸ್/ಸಿ.ಎ(1)/2013-14 ದಿನಾಂಕ: 09.11.2023
2. ಇಲಾಖಾ ಸುತ್ತೋಲೆ ಸಂಖ್ಯೆ: ಡಿ.ಟಿ.ಇ/ಎನ್.ಎಸ್.ಎಸ್/01/ಐಡಿಪಿ/2023-24/1 ದಿನಾಂಕ: 03.06.2023
3. ರಾಜ್ಯ ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/19/2021/2023-24/434ದಿನಾಂಕ: 20.12.2023
4. ಕೇಂದ್ರ ಸರ್ಕಾರದ 2006 ರ ರಾಷ್ಟ್ರೀಯ ಸೇವಾ ಯೋಜನೆಯ ಪರಿಷ್ಕೃತ ಮಾನ್ಯುಯಲ್

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ(1)ಕ್ಕೆ 2017-18 ನೇ ಸಾಲಿಗೆ ಒಂದು ಬಾರಿ ಮಾತ್ರ ತಾಂತ್ರಿಕ ಶಿಕ್ಷಣ ಇಲಾಖೆಯ 50 ಸ್ವ-ಆರ್ಥಿಕ ಘಟಕಗಳನ್ನು ರಾಜ್ಯ ಸರ್ಕಾರದ ಅನುದಾನಕ್ಕೊಳಪಡಿಸಿ ಹೆಚ್ಚುವರಿ ಸ್ವಯಂಸೇವಕರ ಹಂಚಿಕೆಯೊಂದಿಗೆ ಬಿಡುಗಡೆಗೊಳಿಸಲಾದ ದೈನಂದಿನ ಚಟುವಟಿಕೆಗಳಿಗೆ ಮತ್ತು ವಿಶೇಷ ಶಿಬಿರಗಳ ಅನುದಾನದಲ್ಲಿ ಮತ್ತು 2019ಕ್ಕೆ ವಿಶೇಷ ಶಿಬಿರದ ಊಟದ ಬಾಬ್ತಿಗಾಗಿ ಪ್ರತಿ ಘಟಕಕ್ಕೆ ಹೆಚ್ಚುವರಿಯಾಗಿ ₹10,000.00 ಗಳನ್ನು ಬಿಡುಗಡೆಗೊಳಿಸಿದ ಅನುದಾನ ಮತ್ತು ಪಿ.ಎಫ್.ಎಂ.ಎಸ್. ಮೂಲಕ ಬಿಡುಗಡೆಗೊಳಿಸಲಾದ 2022-23ನೇ ಸಾಲಿನ ಅನುದಾನಗಳನ್ನೂ ಒಳಗೊಂಡ ಲೆಕ್ಕಪರಿಶೋಧನಾ ವರದಿಯಲ್ಲಿನ, ಉಳಿಕೆ/ಆಕ್ಷೇಪಿತಮೊತ್ತವನ್ನು ಉಲ್ಲೇಖ(1)ರಂತೆ ಈಗಾಗಲೇ ಪ್ರಕಟಿಸಲಾಗಿದೆ. ಮುಂದುವರೆದು, ಉಲ್ಲೇಖ (2)ರ ಸುತ್ತೋಲೆಯಂತೆ ಪ್ರಾಚಾರ್ಯರುಗಳು ಈವರೆಗೂ ಸ್ವ-ಆರ್ಥಿಕ ಘಟಕಗಳ ಅನುಷ್ಠಾನಕ್ಕಾಗಿ ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಎನ್.ಎಸ್.ಎಸ್. ಶುಲ್ಕವು ಮತ್ತು ಅನುದಾನಿತ ಘಟಕಗಳಲ್ಲಿನ ಮೊತ್ತವು ಕಾರಣಾಂತರಗಳಿಂದ ಉಳಿಕೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಹಿಂದಿನ ಆರ್ಥಿಕ ವರ್ಷಗಳ ಉಳಿಕೆ ಮೊತ್ತದ ಬಳಿಕೆಗಾಗಿ ರಾಜ್ಯ ಸರ್ಕಾರಕ್ಕೆ ಮಾರ್ಗದರ್ಶನ ಕೋರಲಾಗಿ ಉಲ್ಲೇಖ(3) ರಂತೆ ಉಳಿಕೆಮೊತ್ತದಿಂದ ಸಂಸ್ಥೆಯ ರಾ.ಸೇ.ಯೋ. ಕೋಶಗಳವತಿಯಿಂದ ಸಂಸ್ಥೆಯ ಆವರಣದಲ್ಲಿಯೇ ಉಲ್ಲೇಖ(4)ರಲ್ಲಿ ನಿರ್ಬಂಧಿತ ವ್ಯಚ್ಛಗಳನ್ನು ಹೊರತುಪಡಿಸಿ ಸ್ಥಿರಾಸ್ತಿಗಳ ನಿರ್ಮಾಣಕ್ಕಾಗಿ ಬಳಸಲು ರಾಜ್ಯ ಸರ್ಕಾರದಿಂದ ಅದೇಶಿಸಲಾಗಿದೆ. ಸದರಿ ಆದೇಶದಂತೆ, ಪ್ರಸಕ್ತ ಶೈಕ್ಷಣಿಕ/ಆರ್ಥಿಕ ವರ್ಷಕ್ಕೆ ಮಾತ್ರ ಸೀಮಿತಗೊಳಿಸಿ ತಮ್ಮ ಸಂಸ್ಥೆಯಲ್ಲಿ ಸ್ಥಿರಾಸ್ತಿಗಳ ನಿರ್ಮಾಣ ಮಾಡಿ ಪ್ರಚಾರ್ಯರಿಂದ ಧೃಢೀಕರಿಸಿದ ರಾ.ಸೇ.ಯೋ ಪಾಸ್ ಬುಕ್‌ನ ನೆರಳಚ್ಚು ಪ್ರತಿಯೊಂದಿಗೆ, ಸಂಸ್ಥೆಯ ಆವರಣದಲ್ಲಿಯೇ ನಿರ್ಮಾಣ ಮಾಡಲಾದ ಸ್ಥಿರಾಸ್ತಿಗಳ ಛಾಯಾಚಿತ್ರವುಳ್ಳ ವಿವರವಾದ ವರದಿಯನ್ನು ಇಲಾಖೆಯ ರಾಷ್ಟ್ರೀಯ ಸೇವಾ ಯೋಜನಾ ಕೋಶ ಕೊಠಡಿ ಸಂಖ್ಯೆ 106, ಮೊದಲನೆ ಮಹಡಿ ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು-01 ಇಲ್ಲಿಗೆ ಅಂಚೆ ಮೂಲಕ ಕಳುಹಿಸಲು ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

ನಿರ್ದೇಶಕರು

ಇವರಿಗೆ:
1. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ - ಸೂಕ್ತ ಕ್ರಮಕ್ಕಾಗಿ.
2. ರಾಜ್ಯ ಎನ್ ಎಸ್ ಎಸ್ ಅಧಿಕಾರಿಗಳು ರಾಜ್ಯ ಎನ್.ಎಸ್.ಎಸ್ ಕೋಶ ಬೆಂಗಳೂರು -ಇವರ ಮಾಹಿತಿಗಾಗಿ
3. ಇ-ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.